**◆ ಆಧುನಿಕ ತಂತ್ರಜ್ಞಾನ ಬರುವ ಪೂರ್ವದಲ್ಲಿಯೇ ಭಾರತೀಯ ಕಲಾಮಾಧ್ಯಮಗಳು ಜಾಗತೀಕರಣಗೊಂಡಿವೆ ಎನ್ನುವುದು ನಿಮ್ಮ ಅಭಿಪ್ರಾಯ. ಈ ಅನಿಸಿಕೆ ಹೇಗೆ ರೂಪುಗೊಂಡಿತು?**

ಒಂದು ಕಲಾಪ್ರಕಾರವು ಹೆಚ್ಚು ಜನರನ್ನು ತಲುಪುವುದು ಸಂತೋಷದ ವಿಷಯವೇ. ಭಾರತೀಯ ಕಲಾಪ್ರಕಾರಗಳ ಬಗ್ಗೆ ಇತರ ದೇಶಗಳ ಜನರಿಗೆ ಕುತೂಹಲವಿದೆ ಎನ್ನುವುದು ಕೂಡ ಸಂತೋಷದ ವಿಷಯವೇ. ಆದರೆ, ಈಗ ನನ್ನ ಗಮನಿಸುವಿಕೆಯ ಪ್ರಕಾರ, ಯಾವುದು ಅತಿಯಾಗಿ ಜಾಗತೀಕರಣದ ಚಪಲದೊಂದಿಗೆ ವಿಸ್ತರಿಸಿಕೊಳ್ಳುತ್ತದೋ, ಅದು ವಿಷಾವತಾರ (toxic avatar) ತಾಳುತ್ತದೆ. ಔಷಧ ಕ್ಷೇತ್ರ, ಕೃಷಿ ಮತ್ತು ಕೈಗಾರಿಕೆ ಕ್ಷೇತ್ರಗಳಲ್ಲಿ ಹೀಗೆ ಅತಿಯಾದ ಜಾಗತೀಕರಣದಿಂದ ಆಗಿರುವ ತೊಂದರೆಗಳನ್ನು ಗಮನಿಸಬಹುದು. ಅತಿಯಾದ ಜಾಗತೀಕರಣವು, ಅತಿಯಾದ ಬಂಡವಾಳಶಾಹಿತ್ವಕ್ಕೆ ಎಡೆ ಮಾಡಿಕೊಡುತ್ತದೆ. ಈ ಅತೀ ಎಂಬುದು ಯಾವತ್ತಿದ್ದರೂ ವಿಷವೆ. ಅದು ಅಸ್ತಿತ್ವದ ಕಾರಣವನ್ನು ಹುಡುಕುವ ದಾರಿಯನ್ನು ಮುಚ್ಚಿಬಿಡುವುದು. ಇದೇ ಸಮಸ್ಯೆ ಕಲಾಪ್ರಕಾರಗಳಿಗೂ ಅನ್ವಯಿಸುತ್ತದೆ. ಒಡಿಸ್ಸಿ ಕಲಾಪ್ರಕಾರ ನಿಂತ ನೀರಲ್ಲ. ಅದು ನಿರಂತರ ಬದಲಾವಣೆಗಳನ್ನು ಸ್ವಾಗತಿಸುತ್ತ ವಿಕಾಸಹೊಂದಿದೆ. ಆದರೆ, ಅದನ್ನು ಪ್ರವಾಸೋದ್ಯಮದ ಪ್ರಚಾರಕ್ಕೆಂದು ಎಷ್ಟರ ಮಟ್ಟಿಗೆ ಮತ್ತು ಯಾವ ರೀತಿ ಬಳಸಿಕೊಳ್ಳಬಹುದು ಎಂಬುದನ್ನು ಪರಾಮರ್ಶೆ ಮಾಡಬೇಕು. ಕಲಾವಿದ್ವಾಂಸರು ಮತ್ತು ಕಲಾವಿದರು ಈ ಕುರಿತು ಯೋಚಿಸಬೇಕು.

**◆ ನಿಮ್ಮ ಗುರುಪರಂಪರೆಯನ್ನು ನೆನಪಿಸಿಕೊಳ್ಳುವಿರಾ?**

ನನ್ನ ಬದುಕಿನ ಈ ಮುಸ್ಸಂಜೆಯಲ್ಲಿ ಜ್ಞಾನವು ಗರಗಸದ ತುಣುಕುಗಳಂತೆ ಎಲ್ಲ ಮೂಲಗಳಿಂದಲೂ ದೊರೆಯುತ್ತಿದೆ. ಅವೆಲ್ಲವೂ ಒಂದು ನಿರ್ದಿಷ್ಟ ವಿಶ್ವ ದೃಷ್ಟಿಕೋನವನ್ನು ರೂಪಿಸಲು ನೆರವಾಗುತ್ತಿವೆ. ನೃತ್ಯವನ್ನು ಇನ್ನಷ್ಟು ಸ್ಪಷ್ಟ ದೃಷ್ಟಿಕೋನದೊಂದಿಗೆ ನೋಡಲು ಸಹಾಯ ಮಾಡುತ್ತಿವೆ. ಸಾಹಿತ್ಯದೆಡೆಗೆ ನನ್ನ ಒಲವು, ದೃಶ್ಯಕಲೆಯ ಬಗೆಗಿನ ಆಸಕ್ತಿ, ಸಂಗೀತ, ಶಿಲ್ಪ ಮತ್ತು ಮಾನವಶಾಸ್ತ್ರ ಮುಂತಾದ ಅನೇಕಾನೇಕ ವಿಚಾರಗಳು ನೃತ್ಯದ ಬಗ್ಗೆ ನನ್ನ ದೃಷ್ಟಿಕೋನವನ್ನು ರೂಪಿಸಲು ನೆರವಾಗಿವೆ. ಒಂದು ವಿಚಾರವನ್ನು ಎಲ್ಲ ದಿಕ್ಕುಗಳಿಂದಲೂ ಅರಿಯಲು ಸದಾ ಪ್ರಯತ್ನಿಸುತ್ತಿರುವುದರಿಂದಲೋ ಏನೋ, ನಾನು ಸಮಗ್ರರೂಪದ ಗ್ರಹಿಕೆಯನ್ನು ಹೊಂದುವುದು ಸಾಧ್ಯವಾಗಿದೆ. ಹೀಗೆ ಒಂದು ಕಲಾಪ್ರಕಾರದ ಗತಿಶೀಲತೆಗೆ ಈ ಎಲ್ಲಾ ಕ್ಷೇತ್ರಗಳೂ ಕೊಡುಗೆಯನ್ನು ಕೊಡುತ್ತಲೇ ಇರುತ್ತವೆ. ಒಡಿಸ್ಸಿಯು ಹೊಸ ಹೊಸ ಪರಿಕಲ್ಪನೆಗಳ ಮೂಲಕ ರಸಿಕರ ಮುಂದೆ ಅನಾವರಣಗೊಳ್ಳುತ್ತಿರುವುದನ್ನು ಈಗಾಗಲೇ ನಾನು ನೋಡುತ್ತಿದ್ದೇನೆ. ನೃತ್ಯಕ್ಕೆ ಒಳಿತಾಗುವ ವಿಷಯಗಳು ಉಳಿದು, ತೊಡಕಾಗುವ ವಿಷಯಗಳು ಅಳಿದುಹೋಗಲಿ ಎಂದು ನಾನು ಸದಾ ಆಶಿಸುತ್ತಲೇ ಇರುತ್ತೇನೆ.

ನನ್ನ ಗುರು ದೇಬಪ್ರಸಾದ್ ಅವರು ಜೀವನವನ್ನು ಅದಮ್ಯವಾಗಿ ಪ್ರೀತಿಸಿದ ವ್ಯಕ್ತಿ. ಆಗೀಗ ಅವರು ವಿವಾದಗಳಲ್ಲಿಯೂ ಸಿಲುಕುತ್ತಿದ್ದರು. ಒಡಿಸ್ಸಿಯನ್ನು ಪುನರುತ್ಥಾನಗೊಳಿಸಿದ 'ಜಯಂತಿಕಾ' ತಂಡದಲ್ಲಿದ್ದ ಹಿರಿಯ ಗುರುಗಳ ಪೈಕಿ ದೇಬಪ್ರಸಾದ್ ಅವರೇ ಸಣ್ಣವಯಸ್ಸಿನವರಾಗಿದ್ದರು. ಅವರು ಸಂಪ್ರದಾಯಸ್ಥರಾಗಿದ್ದರೂ, ಶಾಸ್ತ್ರೀಯ ವಿಚಾರಗಳ ಜೊತೆಗೆ, ಬುಡಕಟ್ಟು ಮತ್ತು ಜನಪದ ಸಂಗತಿಗಳೂ ಸೇರಿರಬೇಕು ಎಂದು ಆಗ್ರಹಿಸಿದವರು. 60ರ ದಶಕದಲ್ಲಿ ಒಡಿಸ್ಸಿ ನೃತ್ಯ ಪರಿಕಲ್ಪನೆಯನ್ನು ಶಾಸ್ತ್ರೀಯ ಚೌಕಟ್ಟಿನಲ್ಲಿರಿಸಿ ಸುಧಾರಿಸುವ ಉದ್ದೇಶದಿಂದ ರಚನೆಯಾದ 'ಜಯಂತಿಕಾ' ಎಂಬ ಸಭೆಯಲ್ಲಿ ಅವರು ತಮ್ಮ ಈ ಆಶಯವನ್ನು ಮಂಡಿಸಿದ್ದರು. ಬುಡಕಟ್ಟು ಮತ್ತು ಜನಪದ ಸಂಗತಿಯ ಹೂರಣವಿಲ್ಲದೇ ಬರೀ ಶಾಸ್ತ್ರೀಯ ಚೌಕಟ್ಟಿಗೆ ಅಂಟಿಕೊಂಡಿದ್ದರೆ ಅದು ಸುಂದರವಾಗಿ ಕಾಣುವ ಬಿಳಿಸಕ್ಕರೆಯಂತೆ ಗೋಚರಿಸಬಹುದು ಎಂದು ಅವರು ಹೇಳುತ್ತಿದ್ದರು.

ಗುರುಗಳು ಕಾಣಿಸಿದ ಕಾಣ್ಕೆಯ ಆಧಾರದಲ್ಲಿಯೇ ಶಿಷ್ಯರು ನಡೆಯುತ್ತಾರೆ ತಾನೇ. ನಾನು ಶಾಸ್ತ್ರೀಯ, ಜನಪದ ಮತ್ತು ಸಮಕಾಲೀನ ನೃತ್ಯಶೈಲಿಯನ್ನು ಕಲಿಯುತ್ತ ಸಾಗಿದವನು. ಹಾಗೆ ನೋಡಿದರೆ ಶೈಲಿಯನ್ನು